<u>ಸಾಕ್ಷಿಯನ್ನು ದಿಃ**14.08.2024** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಟಿ.ಎಂ.ಎಸ್.ವಕೀಲರಿಂದ:</u>

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಸರ್ಕಾರಿ ನೌಕರನಾಗಿ ನಿವೃತ್ತಿಯಾಗಿರುತ್ತೇನೆ. ನನ್ನ ಊರಾದ ಅಮೃತೂರಿನಲ್ಲಿ 2000-2500 ಮನೆಗಳು ಇವೆ. ಸದರಿ ಊರಿನ ಎಲ್ಲಾ ಮನೆಯವರ ಪರಿಚಯವಿದೆ. ಸದರಿ ಊರಿನವರ ಎಲ್ಲಾ ದಾಖಲೆಗಳ ಬಗ್ಗೆ ನನಗೆ ಗೊತ್ತು. ತಮ್ಮಯ್ಯನವರ ತಮ್ಮ ಲಿಂಗಯ್ಯ ಗೊತ್ತು. ತಮ್ಮಯ್ಯನವರ ತಂದೆ ಹೆಸರು ನನಗೆ ಗೊತ್ತಿಲ್ಲ. ತಮ್ಮಯ್ಯನವರ ಒಡಹುಟ್ಟಿದವರು ಎಷ್ಟು ಜನ ಎಂದರೆ ಸಾಕ್ಷಿಯು ಲಿಂಗಯ್ಯ ಒಬ್ಬರು ಗೊತ್ತು ಎಂದು ನುಡಿಯುತ್ತಾರೆ. ತಮ್ಮಯ್ಯ ಹಾಗೂ ಅವರ ತಮ್ಮ ಲಿಂಗಯ್ಯನವರಿಗೆ ಎಷ್ಟು ಆಸ್ತಿಗಳು ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಸದರಿಯವರ ನಡುವೆ ವಿಭಾಗ ಆದ ಬಗ್ಗೆ ದಾಖ್ಲೆ ನೋಡಿರುವುದಿಲ್ಲ. ಆ ಕುರಿತು ತಿಳಿದುಕೊಂಡಿರುತ್ತೇನೆ. ಸದರಿ ವಿಭಾಗ 50-60 ವರ್ಷಗಳ ಹಿಂದೆ ಆಗಿರುತ್ತದೆ. ಸದರಿ ವಿಭಾಗದಲ್ಲಿ ನಾನು ಪಾಲ್ಗೊಂಡಿರಲಿಲ್ಲ. ಸದರಿ ವಿಭಾಗ ಊರಿನಲ್ಲಿ ಮಾತನಾಡುತ್ತಿದ್ದ ಕಾರಣ ಗೊತ್ತಾಗಿರುತ್ತದೆ. ಸದರಿ ವಿಭಾಗದಲ್ಲಿ ತಮ್ಮಯ್ಯ ಮತ್ತು ಲಿಂಗಯ್ಯರವರಿಗೆ ಮಾರ್ಕೋನಹಳ್ಳಿ ನೀರಿನ ಅಚ್ಚುಕಟ್ಟಿನಲ್ಲಿ, ಯಾಚನಹಳ್ಳಿ ಮತ್ತು ಅಮೃತೂರಿನಲ್ಲಿ ಬಂದಿರುತ್ತದೆ. ಸದರಿ ಇಬ್ಬರಿಗೂ ಅಮೃತೂರಿನಲ್ಲಿ ಮನೆಯ ನಿವೇಶನ ಬಂದಿರುತ್ತದೆ. ಸದರಿ ನಿವೇಶನದ ವಿಸ್ತೀರ್ಣ 2 ಗುಂಟೆ ಇತ್ತು. ಸದರಿ ಆಸ್ತಿಯಲ್ಲಿ ಪೂರ್ವ-ಪಶ್ಚಿಮ 36 ಅಡಿ ಉತ್ತರ -ದಕ್ಷಿಣ 43 ಅಡಿ ತಮ್ಮಯ್ಯನವರಿಗೆ

ಬಂದಿತ್ತು. ಸದರಿ ಅಳತೆಯೇ ಲಿಂಗಯ್ಯನವರಿಗೂ ಬಂದಿತ್ತು. ಸದರಿಯವರು ವಿಭಾಗ ಮಾಡಿಕೊಳ್ಳುವಾಗ ತಮ್ಮಯ್ಯನವರಿಗೂ ಮತ್ತು ಲಿಂಗಯ್ಯನವರಿಗೂ ಹೆಂಚಿನ ಮನೆ ವಿಭಾಗವಾಗಿ ಬಂದಿತ್ತು. ಸದರಿ ಮನೆಯಲ್ಲಿ ಅರ್ಧ ಹಿಸ್ಸೆಗೆ ಅವರಿಬ್ಬರು ಮನೆಯ ಮಧ್ಯಕ್ಕೆ ಗೋಡೆ ಹಾಕಿದ್ದರು ಎಂದರೆ ಸರಿ. ಸದರಿ ಗೋಡೆಗೆ ಮಧ್ಯದಲ್ಲಿ ಒತ್ತು ಕಲ್ಲುಗಳನ್ನು ನೀಡಲಾಗಿತ್ತು ಎಂದರೆ ಸರಿ. ಸದರಿ 2 ಭಾಗದ ಒಟ್ಟು ಆಸ್ತಿಗೆ ಚೆಕ್ಕು ಬಂದಿ ಪೂರ್ವಕ್ಕೆ: ಮಧುಮೇಷ್ಟ್ರು , ಪಶ್ಚಿಮಕ್ಕೆ:ರಸ್ತೆ, ಉತ್ತರಕ್ಕೆ: ಜಯಮ್ಮ ಮತ್ತು ದಕ್ಷಿಣಕ್ಕೆ:ರಸ್ತೆ ಇರುತ್ತದೆ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ .
ಕುಣಿಗಲ್.